ತೆಗೆದು ಹಾಕಿ ಅದರ ತೆರೆದ ಬಾಗಿಲಿಗೆ ಬಿದಿರಿನ ಕಂಬಿಗಳನ್ನು ಜೋಡಿಸಿದ ಪಂಜರವಾಗಿತ್ತು ಅದು. ಒಳಗೆ ಕೂರಲೊಂದು ಅಡ್ಡ ಕಡ್ಡಿಯನ್ನು ಹಾಕಿದ್ದ. ಟಿನ್ನಿನ ಕಂಬಿ ಸರಿಸಿ ಪಟಪಟನೆ ಮೃದು, ನುಣುಪು ರೆಕ್ಕೆ ಬಡಿದು ಕೊಸರಾಡುತ್ತ ಹಿಡಿತದಿಂದ ನುಸುಳಿ ತಪ್ಪಿಸಿಕೊಳ್ಳಲು ಚಡಪಡಿಸಿದ ಬೆಚ್ಚಗಿನ ಬಣ್ಣದ ಆಕಾಶದ ಅತಿಥಿಯನ್ನು ಪಂಜರದೊಳಗೆ ಬಂಧಿಸಿದೆ. ಕಾಲಕಾಲಕ್ಕೆ ನನ್ನ ಗಿಳಿರಾಮನಿಗೆ ಹಣ್ಣು, ಕಾಳುಗಳನ್ನು ತಂದು ಕೊಡುತ್ತಿದ್ದೆ. ಯಾವ ಪ್ರಮಾದ ಎಸಗದ ತನ್ನನ್ನು ಅನ್ಯಾಯವಾಗಿ ಬಂಧಿಸಿದ್ದನ್ನು ಅದು ಉಪವಾಸ ಸತ್ಯಾಗ್ರಹ ಮಾಡಿ ಪ್ರತಿಭಟಿಸಿತು. ಟಿನ್ನಿನ ಬಾಗಿಲ ಕಡ್ಡಿಗಳನ್ನು ಸವರುತ್ತಿದ್ದ ನನ್ನ ಬೆರಳನ್ನು ಮುನಿದ ಅದು ಚುಂಚಿನಿಂದ ಚುಚ್ಚಲು ಮುನ್ನುಗ್ಗುತ್ತಿತ್ತು. ಉರುಟು ಶರೀರ ಸಿಟ್ಟಿನಿಂದ ಸೆಟೆದು, ರಬ್ಬರ್ ವೈಸರಿನಂತಹ ವೃತ್ತಾಕಾರದ ಕೆಂಗಣ್ಣು ಆಕ್ರೋಶದಲ್ಲಿ ಹಿಗ್ಗಿ ಉರಿಯುತ್ತಿತ್ತು. ಒಮ್ಮೊಮ್ಮೆ ವೈರಾಗ್ಯದಿಂದ ಟಿನ್ನಿನ ಒಳಗಿನ ಕಡ್ಡಿ ಮೇಲೆ ಒಂಟಿಗಾಲಲ್ಲಿ ಕೂತು ದುಃಖಿಸುತ್ತಿತ್ತು. ಕಂಬಿಯ ಸಂದಿನಿಂದ ನಮ್ಮ ಮನೆಯ ಹಿಂದಿನ ಅಶ್ವತ್ಥ ಮರದ ಮೇಲೆ ಹರ್ಷದಿಂದ ಚೀರಾಡುವ ಬಳಗದವರನ್ನು ನೋಡಿ ರೋದಿಸುತ್ತಿತ್ತು. ಅದರ ಸ್ವಾತಂತ್ರ್ಯವನ್ನು ಕಸಿದ ನನ್ನ ಕುರುಡು ಪ್ರೀತಿ ಹಿಂಸೆಯ ಇನ್ನೊಂದು ರೂಪವಾಗಿತ್ತು. ಗಿಳಿಗಳು ಮನುಷ್ಯರ ದನಿ ಅನುಕರಿಸಿ ಮಾತಾಡುತ್ತವೆ ಎಂದು ಪಂಚತಂತ್ರ ಕಥೆಗಳಲ್ಲಿ ಓದಿದ್ದೆ. ಪೇಟೆಯ ಬೀದಿಯ ಪಕ್ಕ ಪಂಜರದಿಂದ ಹೊರಬಂದು ಕಾರ್ಡಿನ ಸಾಲಿನಿಂದ ಒಂದು ಅದೃಷ್ಟ ಪಾನನ್ನು ಎತ್ತಿಡುವ ಶಕುನ ನುಡಿಯುವ ಹಕ್ಕಿನರಸಣ್ಣನ ಗಿಳಿಯನ್ನು ನೋಡಿದ್ದೆ.

ದಿನಾಲು ಪಂಜರದ ಮುಂದೆ ನಿಂತು ನಾನು ಅದಕ್ಕೆ ಕನ್ನಡದ ನುಡಿ ಕಲಿಸಲು ಯತ್ನಿಸಿದೆ. ರಾಮಾ... ಎಂದು ದೀರ್ಘ ಸ್ವರವನ್ನು ಪಠಿಸುತ್ತಿದ್ದೆ. ಕೆಲ ದಿನಗಳ ನಂತರ ನಾನು ನುಡಿದ ನಾದವನ್ನು ಅದು ಪುನರುಚ್ಚಸಲು ಆರಂಭಿಸಿತು. ವನವಾಸದಲ್ಲಿ ಕಷ್ಟ ಅನುಭವಿಸಿದ ರಾಮನ ಹೆಸರನ್ನು ಅದಕ್ಕೆ ಯಾಕೆ ಇಟ್ಟಿದ್ದಾರೊ ತಿಳಿಯದು. ಆದರೆ, ರಾಮನಿಗೆ ವನವಾಸವಾದಂತೆ ಗಿಳಿರಾಮನಿಗೆ ಜೈಲು ವಾಸವಾಗಿತ್ತು. ಶಾಲೆಯ ಕನ್ನಡ ಪಠ್ಯ ಪುಸ್ತಕದಲ್ಲಿ 'ನಾನು ಪಂಜರದ ಪಕ್ಷಿ ನನಗಿನ್ನಾರು ಗತಿ...' ಎಂಬ ಸಾಲಿನಿಂದ ಶುರುವಾಗುವ ಪದ್ಯವಿತ್ತು. ಅದನ್ನೋದಿ ಶೋಕತಪ್ತನಾದರೂ ನನ್ನ ಮುದ್ದಿನ ರಾಮನನ್ನು ಬಿಡುಗಡೆ ಮಾಡಲು ನನ್ನ ಕೆಟ್ಟ ಮೋಹ ಬಿಡಲಿಲ್ಲ. ಅದರ ಪಿಷ್ಟಿಯ ದುರ್ಗಂಧದ ಬಗ್ಗೆ ಮನೆಯಲ್ಲಿ ತಕರಾರುಗಳನ್ನು ನಾನು ಎದುರಿಸಬೇಕಾಯಿತು. ನನ್ನ ರಾಮನನ್ನು ಬಿಟ್ಟು ಗೆಳೆಯರ ಮನೆಗೂ ನಾನು ಹೋಗುತ್ತಿರಲಿಲ್ಲ. ಹೊರಗೆ ಹೋದರೂ ಸಂಸಾರದ ಸಭ್ಯ ಗೃಹಸ್ಥನಂತೆ ಸಂಜೆ ಬೇಗ ಮನೆಗೆ ಮರಳುತ್ತಿದ್ದೆ. ಒಂದು ಅಪರಾಹ್ನ ನನ್ನ ಕಣ್ಣ ಮುಂದಯೇ ಪುಟ್ಟ ರಾಮ ಹೇಗೊ ಪಂಜರದ ಕಡ್ಡಿಯನ್ನು ಸರಿಸಿ ಹಾರಿ ಅಂಗಳದ ರತ್ನಗಂಧಿ ಗಿಡದ ಮೇಲೆ ಕುಳಿತು ಬಿಟ್ಟಿತು. ಹಿಡಿಯಲು ಓಡಿದರೆ ಅದು ಅಲ್ಲಿಂದ ತೋಟದತ್ತ ಹಾರಿತು. ರೆಕ್ಕೆ ಬಲಿತರೂ ಹಾರುವ ರೂಢಿಯಿರದ ಅದು ಗಾಳಿಯ ಸಹಜ ಲಯದಲ್ಲಿ ಬೆರೆತು ಹಾರಲಾರದ ಕಷ್ಟದಲಿತ್ತು. ಅಂಬೆಗಾಲಿನ ಅದರ ಅಪ್ರಬುದ್ಧ ಓಟವನ್ನು ಗಮನಿಸಿದ ಕಾಗೆ ಅನಾಯಾಸ ದಕ್ಕಿದ ಅಮಾಯಕ ಜೀವದ ಮೇಲೆ ಬೇಟೆಯ ದಾಳಿ ಮಾಡಿ ಗದ್ದೆಯಲ್ಲಿ ಅಟ್ಟಾಡಿಸಿ ಕುಕ್ಕಿ ಬೀಳಿಸಿ ಎತ್ತಿಕೊಂಡು ಹೋಯಿತು. ಕ್ಷಣಾರ್ಧದಲ್ಲಿ ಜರುಗಿಹೋದ ದುರಂತಕ್ಕೆ ನಾನು ಅಸಹಾಯಕನಾಗಿ ಸಾಕ್ಷಿಯಾಗುವುದನ್ನು ಬಿಟ್ಟರೆ ನನ್ನಿಂದ ಏನೂ ಮಾಡಲಾಗಲಿಲ್ಲ. ಅದರ ಪ್ರಾಣ ಹರಣಕ್ಕೆ ನಾನು ಕಾರಣನಾಗಿದ್ದೆ. ಒಂದು ಪಕ್ಷಿಯ ಸಾವಿನ ಶೋಕ ರಾಮಾಯಣದಷ್ಟು ತೀವ್ರವಾಗಿರುತ್ತದೆಯೆಂಬ ಸತ್ಯ ನನ್ನ ಕಲ್ಪನೆಗೆ ಮೀರಿದ್ದಾಗಿತ್ತು. ಇನ್ನೊಮ್ಮೆ ನಾನಾಗಿಯೇ ಹಕ್ಕಿಗಳನ್ನು ಸಾಕುವ ಅವಿವೇಕಕ್ಕೆ ಬೀಳಬಾರದೆಂದು ಅಂದು ತೀರ್ಮಾನಿಸಿದೆ.

ಆದರೆ, ನಿನ್ನ ವಿಷಯದಲ್ಲಿ ನನ್ನ ಪ್ರತಿಜ್ಞೆ ಭಂಗವಾಯಿತು. ನಿನ್ನನ್ನು ಇಲ್ಲಿಗೆ ನನ್ನ ಮಗಳು ಋತು ಮತ್ತು ರಾಜೇಶ ಕರೆತಂದರು. ಅವಳ ಗೆಳತಿಯ ಮನೆಯಲ್ಲಿ ನಿನ್ನ ಅಪ್ಪ ಮತ್ತು ಅಮ್ಮ ಗೂಡು ಕಟ್ಟಿ ಇಬ್ಬರಿಗೆ ಜನ್ಮ ನೀಡಿದ್ದರು. ಅವರ ಮನೆಯನ್ನು ಕೆಡಹುವ ಸಂದರ್ಭದಲ್ಲಿ ನಿಮ್ಮ ಗೂಡು ಬಿದ್ದು ಹೋಯಿತು. ಆಗಷ್ಟೆ ನೀವು ಲೋಕಕ್ಕೆ ಕಣ್ತೆರೆದ ಹಸುಗೂಸುಗಳು. ಗೂಡು ಬಿದ್ದೊಡನೆಯೇ ನಿನ್ನ ಹೆತ್ತವರು ಹಾರಿ ಹೋದರು. ನಿನ್ನ ಜತೆಗೆ ಬಂದಿದ್ದ ಸಹಜೀವ ಉಳಿಯಲಿಲ್ಲ. ಅತ್ಯಂತ ಚಮತ್ಕಾರವೆಂಬಂತೆ ನೀನು ಬದುಕುಳಿದೆ. ದೊಡ್ಡ ಚುಂಚಿನ, ಕೊಕ್ಕೆ